3 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.

**ಸಿ.ಸಿ.ನಂ. 779/2022**

ದಿನಾಂಕಃ **12-11-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಪಿ ಎಸ್ ತಿಮಂರಾಯಪ್ಪ | ಚಾಸಾ-9, ಪ್ರಾಸ-7 |
| ತಂದೆಯ ಹೆಸರು ಃ | ಸಣ್ಣ ಹನುಮಂತಪ್ಪ | |
| ವಯಸ್ಸು ಃ | 45 ವರ್ಷ | |
| ಉದ್ಯೋಗ ಃ | ಮುಖ್ಯ ಪೇದೆ | |
| ವಾಸ ಃ | ಅಜ್ಜಂಪುರ | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು 2017 ರಿಂದ 2023 ರವರೆಗೆ ನಾನು ಬೀರೂರು ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 02.08.2021 ರಂದು ಚಾಸಾ-1 ರವರು ಬೀರೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಾದಾಗ ಸಂಜೆ 7.15 ರಿಂದ 8.00 ರವರೆಗೆ ಅವರ ಹೇಳಿಕೆಯನ್ನು ನಿಪಿ-1 ರಂತೆ ಪಡೆದುಕೊಂಡು ಸಂಜೆ 8.15 ಗಂಟೆಗೆ ಠಾಣೆಗೆ ಹಾಜರಾಗಿ  ಠಾಣಾ ಮೊಕದ್ದಮೆ ಸಂಖ್ಯೆ 103ಃ2021 ರಂತೆ ಪ್ರಕರಣ ದಾಖಲು ಮಾಡಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ರವಾನಿಸಿರುತ್ತೇನೆ.  ನಿಪಿ-1 ರ ಹೇಳಿಕೆಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಬಿ) ಎಂದು, ಪ್ರಥಮ ವರ್ತಮಾನ ವರದಿಯನ್ನು  ನಿಪಿ-8 ಎಂದು, ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.   ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-11 ರವರಿಗೆ ಹಸ್ತಾಂತರಿಸಿರುತ್ತೇನೆ.

ಪಾಟೀಸವಾಲುಃ ಆರೋಪಿ ಪರ  ಶ್ರೀ. ಕೆ.ಎಸ್.ಆರ್  ವಕೀಲರಿಂದಃ

ಪ್ರವವ ದಾಖಲಿಸುವ ಪೂರ್ವದಲ್ಲಿ ಯಾವ ವಿಚಾರಕ್ಕೆ ಗಲಾಟೆಯಾಯಿತು ಎಂಬ ಬಗ್ಗೆ ಆರೋಪಿತರನ್ನು ವಿಚಾರಿಸಿರುವುದಿಲ್ಲ.  ಆರೋಪಿತರೂ ಸಹ ಠಾಣಾ ಗುನ್ನೆ ಸಂಖ್ಯೆ 104ಃ2021 ರಂತೆ ಚಾಸಾ-1 ಮತ್ತು ಇತರರ ವಿರುದ್ಧ ದೂರು ದಾಖಲಿಸಿರುತ್ತಾರೆ ಎಂದರೆ ಸರಿ.  ನಾನು ಹೇಳಿಕೆಯನ್ನು ದಾಖಲಿಸಿದ ನಂತರ ಸ್ಥಳಕ್ಕೆ ಹೋಗಿ ಪರಿಶೀಲಿಸಿರುವುದಿಲ್ಲ ಎಂದರೆ ಸರಿ.  ಚಾಸಾ-1 ರವರೊಂದಿಗೆ ಶಾಮೀಲಾಗಿ ಆರೋಪಿತರಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ಪ್ರವವ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.  ಮೊದಲು ಆರೋಪಿತರು ದೂರು ನೀಡಿರುತ್ತಾರೋ ಅಥವಾ ಚಾಸಾ-1 ರವರು ದೂರು ನೀಡಿರುತ್ತಾರೋ ಎಂದು ನಾನು ಪರಿಶೀಲನೆ ಮಾಡಿರುವುದಿಲ್ಲ.  ನಾನು ಚಾಸಾ-1 ರವರ ಹೇಳಿಕೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.